

ಡಾ.ವಿನೋದ ಛೆಬ್ಬಿ

ಸಂಗಾತಿಯ ಪ್ರಭಾವವನ್ನು ನೀನು ಸಹಿಸಿಕೊಳ್ಳಬೇಕು ಎನ್ನುವುದನ್ನು ಈಗ ಹೆಣ್ಣಿನ ಬದಲು ಗಂಡಿಗೆ ಹೇಳುವ ಪ್ರಸಂಗ ಬಂದಿದೆಯೆ?

# 45: ನೇತ್ಯಾತ್ಮಕ ಭಾವ ವಿನಿಮಯ

ದಂಪತಿಗಳು ದಾಂಪತ್ಯದ ಬಿರುಕನ್ನು ಹೇಗೆ ದುರಸ್ತಿ ಮಾಡಿಕೊಳ್ಳುತ್ತಾರೆ ಎಂದು ಹೋದಸಲ ಮಾತಾಡುತ್ತಿದ್ದೆವು. ಈ ಸಲ ಜಗಳವಾಡುವ ಗಂಡಹೆಂಡಿರ ಭಾವನೆಗಳ ಕಡೆಗೆ ದೃಷ್ಟಿ ಹಾಯಿಸೋಣ.

ಜಗಳದಲ್ಲಿ ಒಬ್ಬರು ನೇತ್ಯಾತ್ಮಕವಾಗಿ ವರ್ತಿಸಿದಾಗಲೆಲ್ಲ (ಮುನಿಸು, ಕೋಪ, ದುಃಖ, ವಿಷಾದ, ದ್ವೇಷ) ಇನ್ನೊಬ್ಬರೂ ನೇತ್ಯಾತ್ಮಕವಾಗಿ ಸ್ಪಂದಿಸುತ್ತ ರಷ್ಟೆ? ಅನಂತರ ಈ ಭಾವ ಇಬ್ಬರ ಮನದಲ್ಲಿ ಸುಮಾರು ಹೊತ್ತು ಉಳಿದಿರುತ್ತದೆ. ನೇತ್ಯಾತ್ಮಕ ಭಾವ ವಿನಿಮಯಕ್ಕೂ ದಾಂಪತ್ಯದ ಬಾಂಧವ್ಯಕ್ಕೂ ನೇರವಾದ ಸಂಬಂಧವಿದೆಯೆ ಎಂದು ನೋಡೋಣ. ನೇತ್ಯಾತ್ಮಕ ಭಾವ ವಿನಿಮಯವು ಮೂರು ರೀತಿಯದು ಆಗಿರಬಹುದು: 1) ಸೌಮ್ಯಭಾವಕ್ಕೆ ಸೌಮ್ಯಭಾವದಿಂದ ಸ್ಪಂದಿಸುವುದು. ಉದಾ. 'ಹಾಗೆ ಮಾಡುವುದು ಸರಿಯಲ್ಲ.' 'ನನಗೆ ಗೊತ್ತು ನೀನು ಸುಮ್ಮನಿರು.' (ಸಿಡುಕು – ಸಿಡುಕು); 2) ಸೌಮ್ಯಭಾವಕ್ಕೆ ತೀಕ್ಷ್ಣಭಾವದಿಂದ ಸ್ಪಂದಿಸುವುದು. ಉದಾ. 'ಹಾಗೆ ಮಾಡುವುದು ಸರಿಯಲ್ಲ.' 'ಏ, ನೀನು ಬಾಯಿಹಾಕಬೇಡ. ನಿನಗೇನು ಗೊತ್ತು ಮಹಾ?' (ಕೋಪ – ತುಚ್ಛೀಕರಣ); 3) ತೀಕ್ಷ್ಣಭಾವಕ್ಕೆ ತೀಕ್ಷ್ಣಭಾವದಿಂದ ಸ್ಪಂದಿಸುವುದು. 'ಇಷ್ಟೊಂದು ಮೂರ್ಖತನ ನಿನ್ನಲ್ಲಿದೆ ಎಂದು ನನಗೆ ಗೊತ್ತಿರಲಿಲ್ಲ.' 'ನಿನಗೇನು ಬುದ್ಧಿ ಇದೆ ಅಂತ ನನಗೆ ಬುದ್ಧಿ ಹೇಳುತ್ತಿದ್ದೀಯಾ?' (ತುಚ್ಛೀಕರಣ – ತುಚ್ಛೀಕರಣ). ಇಲ್ಲಿ ಮೂರನೆಯದಾದ ಮುಯ್ಯಿಗೆ ಮುಯ್ಯಿ ಎನ್ನುವ ನೇತ್ಯಾತ್ಮಕ ಭಾವ ವಿನಿಮಯವು ದಾಂಪತ್ಯದ ಅಸಂತೋಷವನ್ನು ಹೆಚ್ಚಿಸುತ್ತದೆ ಎಂದು ಮೇಲುನೋಟಕ್ಕೇ ಗೊತ್ತಾಗುತ್ತದೆ. ಅಷ್ಟಿದ್ದರೂ ಹೀಗೆ ವರ್ತಿಸುವ ಅನೇಕ ದಾಂಪತ್ಯಗಳು ಕೂಡಿ ನಡೆಯುವುದನ್ನು ನೋಡುತ್ತಿದ್ದೇವೆ. ಹಾಗಾದರೆ, ಜಗಳದ ಯಾವ ಘಟಕವು ದಾಂಪತ್ಯ ಮುರಿಯುವುದನ್ನು ನಿರ್ಧರಿಸುತ್ತದೆ? ಇದಕ್ಕಾಗಿ ಜಾನ್ ಗಾಟ್‌ಮನ್ ಹಾಗೂ ನೀಲ್ ಜಾಕೊಬ್ಸನ್ ಸೇರಿ ಜಂಟಿ ಅಧ್ಯಯನ ನಡೆಸಿದರು. ದಂಪತಿಗಳ ಜಗಳವನ್ನು ಚಿತ್ರೀಕರಿಸಿ ಅದರ ಪರಿಣಾಮವನ್ನು ಒಂದೆರಡಲ್ಲ, ಒಂಬತ್ತು ವರ್ಷ ಗಮನಿಸಿ ಬೆಚ್ಚಿಬೀಳಿಸುವ ವಿಷಯವೊಂದನ್ನು ಕಂಡುಹಿಡಿದರು. ಏನದು? ನೇತ್ಯಾತ್ಮಕ ಭಾವವನ್ನು ಹೆಚ್ಚಿಸುವ ಗಂಡಸರಿಂದ ದಾಂಪತ್ಯಗಳು ಹೆಚ್ಚಾಗಿ ಮುರಿಯುತ್ತವೆ! ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಹೆಣ್ಣಿನ ಭಾವನಾತ್ಮಕ ಪ್ರಭಾವಕ್ಕೆ ಒಳಗಾಗಲು ಒಪ್ಪದೆ ಪ್ರತಿರೋಧಿಸುವ ಗಂಡಸಿನಿಂದ ದಾಂಪತ್ಯದ ಸಂಬಂಧದ ಮೇಲೆ ಘೋರ ಪರಿಣಾಮ ಆಗುತ್ತದೆ! ಇದೇನೆಂಬುದನ್ನು ಒಂದು ದೃಷ್ಟಾಂತದ ಮೂಲಕ ಅರ್ಥಮಾಡಿಕೊಳ್ಳೋಣ.

ಹೆಂಡತಿಯ ಅಮ್ಮ ಮನೆಗೆ ಬರುತ್ತಿರುವುದನ್ನು ಗಂಡ ವಿರೋಧಿಸುತ್ತಿದ್ದಾನೆ.

ಗಂಡ: ನಿಮ್ಮಮ್ಮ ಬಂದರೆ ನಮ್ಮ ಮಕ್ಕಳ ನಡುವೆ ಭೇದ ಮಾಡುತ್ತಾಳೆ. ಇದೆಲ್ಲ ನನಗೆ ಸಹಿಸಲು ಸಾಧ್ಯವಿಲ್ಲ.

ಹೆಂಡತಿ: ನಮ್ಮಮ್ಮ ಯಾಕೆ ಬೇಡ ಎನ್ನುತ್ತೀ ಗೊತ್ತಾ? ನನ್ನೇಲೆ ಜೋರು ಮಾಡುತ್ತೀಯಲ್ಲ, ಅದು ನಮ್ಮಮ್ಮ ಬಂದಾಗ ನಡೆಯುವುದಿಲ್ಲ. ಅದಕ್ಕೇ!

ಗಂ: ನಿಮ್ಮಮ್ಮನಿಗೆ ಎಷ್ಟು ಸರ್ತಿ ಹೇಳಿದ್ದೀನಿ ಮಕ್ಕಳ ನಡುವೆ ಭೇದಭಾವ ತರಬೇಡಿ ಅಂತ. ಅಷ್ಟಿದ್ದರೂ ಹೋದ ಸಲ ಬಂದಾಗ ಮಗನಿಗೆ ಮಾತ್ರ ಬಟ್ಟೆ ತಂದಿದ್ದಾರೆ. ಎಲ್ಲರಿಗೂ ಅಂತ ತಂದಿರುವ ಸಿಹಿತಿಂಡಿಯ ಪ್ಯಾಕೆಟ್ ಮಗಳ ಕೈಯಲ್ಲಿಟ್ಟು ಇದು ನಿನಗೆ ಎಂದು ಹೇಳುತ್ತಾಳೆ!

ಹೆಂ: (ದಿಗ್ಭ್ರಮೆಯಿಂದ) ಅವತ್ತೇ ಮಗಳಿಗೆ ಸರ ತಂದುಕೊಟ್ಟಳಲ್ಲ...? ನಮ್ಮಮ್ಮನಿಗೋಸ್ಕರ ನೀವು ಅಂಥದ್ದೇನು ಮಾಡಿದ್ದೀರಿ?

ಗಂ: ಅವಳಿಗೋಸ್ಕರ ಲೀವ್ ಹಾಕಿ ಪಿಕ್ನಿಕ್‌ಗೆ ಹೋದದ್ದಾಯಿತು. ಊರಿನ ದೇವಸ್ಥಾನ ಹಾಗೂ ಆಸ್ಪತ್ರೆಗಳನ್ನೆಲ್ಲ ಸುತ್ತಿದ್ದಾಯಿತು. ಹಣ ನೀರಿನಂತೆ ಖರ್ಚು ಮಾಡಿದ್ದಾಯಿತು. ಇನ್ನೇನು ಮಾಡಬೇಕಾಗಿತ್ತು?

ಹೆಂ: ರೀ, ಪಿಕ್ನಿಕ್ ಮಕ್ಕಳಿಗೋಸ್ಕರ...

ಗಂ: (ಮಾತಾಡಗೊಡದೆ) ಅವಳ ಕೈಯಲ್ಲಿ ನನ್ನ ಇಡೀ ಸಂಬಳ ಇಟ್ಟು, ನೆಲದುದ್ದಕ್ಕೂ ಬಗ್ಗಿಸಿ ನಮಸ್ಕಾರ ಮಾಡಿ, (ಅಕ್ಕಸದಿಂದ) ಅಮ್ಮಾ ತಾಯಿ ಯಾವಾಗ ತೊಲಗುತ್ತೀಯಾ ಎಂದು ಕೇಳುವುದೊಂದು ಬಾಕಿ!

ಈ ಕೊನೆಯ ವಾಕ್ಯವನ್ನು ಗಮನಿಸಿ. ಇದರಲ್ಲಿ ಕಾಲು ಕೆದರಿ, ಕೆಣಕಿ ಜಗಳ ತೆಗೆಯುವ, ಕೋಪವನ್ನು ಭುಗಿಲೆಬ್ಬಿಸುವ ತುಚ್ಛೀಕರಣವಿದೆ. ಪರಿಣಾಮವಾಗಿ ಹೆಂಡತಿ ಸಹಜವಾಗಿಯೇ ಭುಗಿಲೇಳುತ್ತಾಳೆ.

ಹೆಂ: ನಿಮ್ಮಮ್ಮ ಏನು ಕಡಿಮೆ? ಆಕೆ ಬಂದಾಗಲೆಲ್ಲ ನನ್ನನ್ನು ತನ್ನ ಮಗಳಿಗೆ ಹೋಲಿಸುತ್ತ ನಾನು ಕೀಳು ಎಂದು ಹೇಳುತ್ತಿರುತ್ತಾಳೆ. (ಸ್ವಸಮರ್ಥನೆ)

ಹೆಂಡತಿಯ ನೇತ್ಯಾತ್ಮಕ ಭಾವದ ಪ್ರಭಾವ ತನ್ನ ಮೇಲೆ ಬೀರದಿರಲೆಂದು ಗಂಡ ಇನ್ನಷ್ಟು ತುಚ್ಛೀಕರಣಕ್ಕೆ ಕೈಹಾಕುತ್ತಾನೆ.

ಗಂ: ನನ್ನ ತಂಗಿಯ ಬಗೆಗೆ ಮಾತಾಡುತ್ತೀಯಾ? ಅವಳ ಕಾಲ ಉಗುರಿಗೂ ನೀನು ಸಮ ಅಲ್ಲ! (ತುಚ್ಛೀಕರಣದ ಪರಾಕಾಷ್ಠೆ).

ಇಲ್ಲೇನು ನಡೆಯುತ್ತಿದೆ? ಮೇಲುನೋಟಕ್ಕೆ ಗಂಡ ತನ್ನ ಅತ್ತೆಗೆ ಗೌರವ ಕೊಡದೆ ತುಚ್ಛೀಕರಿಸುತ್ತಿದ್ದಾನೆ ಎಂದೆನಿಸುತ್ತದೆ. ಆದರೆ ಅಂತರಂಗದಲ್ಲಿ? ಹೆಂಡತಿಯ ಕೋಮಲ ಭಾವಗಳು, ಹಾಗೂ ಅವಳ ನೋವಿನ ಅಭಿವ್ಯಕ್ತಿಯು ತನ್ನ ಮೇಲೆ ಪ್ರಭಾವ ಬೀರುವುದರಿಂದ ದೂರ ಉಳಿಯಲು ಹೆಣಗುತ್ತಿದ್ದಾನೆ. ಅವಳ ಎಲ್ಲ ಭಾವನೆಗಳಲ್ಲೂ ತನ್ನ ಅಧೀನದಲ್ಲಿ ಇಟ್ಟುಕೊಳ್ಳುವ, ಹಾಗೂ ತನ್ನ ಮನಬಂದಂತೆ ಅವಳ ಭಾವನೆಗಳ ಮೇಲೆ ಅಧಿಕಾರ ಸ್ಥಾಪಿಸುವ ಗಂಡನ ಸಾಮ್ರಾಜ್ಯಶಾಹಿಯ ದಾಹ ಏಕಮುಖವಾಗಿ ಹರಿಯುತ್ತಿದೆ. ಇಂಥ ಗಂಡಂದಿರು ಹೆಂಡತಿ ಏನೇ ಹೇಳಿದರೂ ಅದಕ್ಕೆ ಗಮನ ಕೊಡದೆ ನಿರ್ಲಕ್ಷಿಸುತ್ತ, ಚಿಕ್ಕ ವಿಷಯವನ್ನೂ ಒಪ್ಪಿಕೊಳ್ಳದೆ ತುಚ್ಛೀಕರಿಸುತ್ತಾರೆ. ವಿಡಿಯೋ ಗೇಮ್‌ನಲ್ಲಿ ಶತ್ರುಗಳನ್ನು ಕಂಡಾಗಲೆಲ್ಲ ಸದೆಬಡಿಯುವ ರೀತಿಯಲ್ಲಿ ಹೆಂಡತಿಯ ಭಾವನೆಗಳನ್ನು, ಅಭಿಪ್ರಾಯಗಳನ್ನು– ಕೆಲವೊಮ್ಮೆ ಹೆಂಡತಿಯನ್ನೂ – ಸದೆಬಡಿಯುತ್ತಾರೆ. ಅಂಥ ಗಂಡಂದಿರು ಇರುವ ದಾಂಪತ್ಯಗಳು ಮುರಿದುಬೀಳುವುದರಲ್ಲಿ ಏನು ಆಶ್ಚರ್ಯವಿದೆ?

ಇದರರ್ಥ ಏನು? ಯಾವುದೇ ದಾಂಪತ್ಯದಲ್ಲಿ ಗಂಡು ತನ್ನ ಮೇಲೆ ಹೆಣ್ಣಿನ ಪ್ರಭಾವ ಬೀರುವುದಕ್ಕೆ ಅವಕಾಶ ಕೊಡುವ ತನಕ ಹಾಗೂ ಕೊಡುವ ಮಟ್ಟದ ವರೆಗೂ ಸೌಹಾರ್ದತೆಯು ಬೆಳೆಯಲು ಸಾಧ್ಯವಿದೆ. ಇದರಿಂದ (ಭಾವನಾತ್ಮಕ) ಅಧಿಕಾರದ ಹಂಚಿಕೆಯೂ ಸಾಧ್ಯವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಗಂಡು ಹೆಣ್ಣಿನ ಪ್ರಭಾವವನ್ನು ತಿರಸ್ಕರಿಸಲು ಶುರುಮಾಡಿದಷ್ಟೂ ದಾಂಪತ್ಯದ ಅವನತಿಗೆ ಹಾದಿಯಾಗುತ್ತದೆ.

ಇಲ್ಲೊಂದು ಪ್ರಶ್ನೆ: ಗಂಡಿನ ಕ್ರೌರ್ಯದಿಂದ ಹೀಗಾಗುತ್ತದೆಯೆ? ಅದಕ್ಕಾಗಿ ಗಾಟ್‌ಮನ್‌ನ ಇನ್ನೊಂದು ಅಧ್ಯಯನವನ್ನು ತೆಗೆದುಕೊಳ್ಳಿ. ಇದರಲ್ಲಿ ಕ್ರೌರ್ಯರಹಿತ ಗಂಡಂದಿರನ್ನು ಒಳಗೊಂಡ 130 ದಾಂಪತ್ಯಗಳನ್ನು ಅಧ್ಯಯನ ಮಾಡಲಾಗಿದೆ; ಇಲ್ಲಿ ಕೂಡ ಗಂಡಂದಿರು ತಮ್ಮ ಹೆಂಡಂದಿರ ಪ್ರಭಾವವನ್ನು ಒಪ್ಪಿಕೊಳ್ಳದೇ ಹೋದಾಗ ಅವುಗಳಲ್ಲಿ 80% ಸಂಬಂಧಗಳು ಮುರಿದು ಬಿದ್ದಿವೆ. ಅದಕ್ಕೆ ವ್ಯತಿರಿಕ್ತವಾಗಿ, ಹೆಣ್ಣು ಗಂಡಿನ ಪ್ರಭಾವವನ್ನು ತನ್ನಮೇಲೆ ಬೀಳಿಸಿಕೊಳ್ಳಲು ಒಪ್ಪಿಕೊಂಡಾಗ ಕುಟುಂಬಗಳಲ್ಲಿ ಸೌಹಾರ್ದತೆ ಉಳಿಸಿಕೊಂಡಿವೆ.

ಇದರರ್ಥ ಏನು? ಆದರ್ಶ ಎನ್ನಿಸಿಕೊಳ್ಳುವ ದಾಂಪತ್ಯದಲ್ಲೂ ಒಬ್ಬರಿಗೊಬ್ಬರು ಟೀಕೆ ಮಾಡುವುದು, ಸಮರ್ಥನೆ ಮಾಡಿಕೊಳ್ಳುವುದು, ಗೋಡೆಹಾಕಿಕೊಳ್ಳುವುದು ಇದ್ದೇಇರುತ್ತದೆ. ಇದಾವುದರಿಂದರೂ ದಾಂಪತ್ಯ ವಿಷಮಿಸುವುದಿಲ್ಲ. ಆದರೆ ಗಂಡು ತನ್ನ ಮೇಲೆ ಹೆಣ್ಣಿನ ಭಾವನಾತ್ಮಕ ಪ್ರಭಾವ ಬೀರಲು ಒಪ್ಪಿಕೊಳ್ಳದಿದ್ದರೆ ಮಾತ್ರ ದಾಂಪತ್ಯ ಬಿರುಕುಬಿಡಲು ಶುರುವಾಗುತ್ತದೆ!

ಈ ಸಂಶೋಧನೆಯು ಭಾರತೀಯರಿಗೆ ಎಷ್ಟರಮಟ್ಟಿಗೆ ಅನ್ವಯಿಸುತ್ತದೆ ಎಂಬುದನ್ನು ನಾನು ಯೋಚಿಸಿದ್ದೇನೆ. ನಮ್ಮಲ್ಲಿ ಗಂಡು–ಹೆಣ್ಣಿನ ಅನುಪಾತ 1000:940 ಇದೆ. ಹೆಣ್ಣು ಶಿಕ್ಷಿತಳಾಗಿ ಗಂಡಿನ ಹೆಗಲಿಗೆ ಹೆಗಲು ಹಚ್ಚಿ ದುಡಿಯುತ್ತಿದ್ದಾಳೆ. ಅವಳ ಭಾವನೆಗಳಿಗೆ ಬೆಲೆಕೊಡದಿದ್ದರೆ ಆಗುವ ಪರಿಣಾಮ ಯಾರ ಊಹೆಗೂ ನಿಲುಕಬಹುದು. ಹಾಗಾಗಿ ಅಂಥ ದಿನಗಳು ನಮ್ಮಲ್ಲಿ ಬರುವುದು ದೂರವಿಲ್ಲ ಎಂದೆನಿಸುತ್ತದೆ. ಇನ್ನೊಂದು ರೀತಿ ಹೇಳಬೇಕೆಂದರೆ, ಸಂಗಾತಿ ಹೇಗೇ ನಡೆದರೂ ನೀನು ಸಹಿಸಿಕೊಳ್ಳಬೇಕು ಎನ್ನುವುದನ್ನು ಈಗ ಹೆಣ್ಣಿನ ಬದಲಾಗಿ ಗಂಡಿಗೆ ಹೇಳುವ ಪ್ರಸಂಗ ಬಂದಿದೆಯೆ? ನನಗೆ ಗೊತ್ತಿಲ್ಲ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.
ಲೈಂಗಿಕ ಸಮಸ್ಯೆಗಳಿಗೆ: 8050255229 (ಮಧ್ಯಾಹ್ನ 2ರಿಂದ 4ರ ತನಕ);
ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)
ಲೇಖಕರ ವಿಳಾಸ: www.medisex.org